5. ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ಮಂಗಳೂರು ತಾಲ್ಲೂಕಿನ ಸಮುದ್ರ ತಡೆಗೋಡೆ ಕಾಮಗಾರಿಯಲ್ಲಿ ಅವ್ಯವಹಾರ.

+ ಶ್ರೀ ಡಿ.ಪಿ.ಸದಾನಂದಗೌಡ (ಪುತ್ತೂರು): ಮಾನ್ಯ ಅಧ್ಯಕ್ಷರೆ, ಮಂಗಳೂರಿನ ಹಳೆಯ ಬಂದರಿನ ಅಲೆಯ ತಡೆಗೋಡೆಯ ಬಗ್ಗೆ ಅತ್ಯಂತ ಗಂಭೀರವಾದ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಲಿಕ್ಕೆ ಇಚ್ಛಿಪಡುತ್ತೇನೆ. 1993ರಲ್ಲಿ ಈ ತಡೆಗೋಡೆಯ ಕಾರ್ಯ ಆರಂಭವಾದಾಗ ಇದರ ಮೊತ್ತ 1.65 ಕೋಟಿ ರೂಪಾಯಿ ಇತ್ತು. ಸುಮಾರು 375 ಮೀಟರ್ ಉದ್ದಕ್ಕೆ ತಡೆಗೋಡೆಯನ್ನು ರಚನೆ ಮಾಡಬೇಕಾಗಿತ್ತು. ಈವೊಂದು ಕಾಮಗಾರಿಯನ್ನು ಒಬ್ಬರು ಗುತ್ತಿಗೆದಾರರಿಗೆ ವಹಿಸಿಕೊಟ್ಟರು. ಅವರು ಕಾಮಗಾರಿಯನ್ನು ಮಾಡಿದರು. ಕಾಮಗಾರಿಯನ್ನು ಮಾಡಿದ ವರ್ಷವೇ 45 ಮೀಟರ್ ತಡೆಗೋಡೆ ಕುಸಿದು ಬಿತ್ತು. 45 ಮೀಟರ್ ಕಾಮಗಾರಿ ಕುಸಿದು ಬಿದ್ದಮೇಲೆ, ಎಲ್ಲಿ ಕಾಮಗಾರಿ ಕುಸಿದು ಬಿದ್ದಿದೆಯೋ ಅದರ ಪುನರ್ ನಿರ್ಮಾಣ ಕಾರ್ಯ ಮಾಡಬೇಕೆನ್ನುವ ದೃಷ್ಟಿಯಿಂದ ಅದಕ್ಕೆ ಪುನಃ ಒಂದು ಎಸ್ಟಿಮೇಟನ್ನು ಮಾಡಿದರು. ಎಷ್ಟಕ್ಕೆ ಮಾಡಿದರು ಅಂದರೆ, 1.65 ಕೋಟಿ ರೂ. ಇದ್ದದ್ದನ್ನು ಪುನರ್ ನಿರ್ಮಾಣ ಕಾರ್ಯ ಎಸ್ಟಿಮೇಟ್‌ನಲ್ಲಿ 2.36 ಕೋಟಿ ರೂ.ಗೆ ಹೆಚ್ಚಿಸಿದರು ಈ ಮಧ್ಯೆ ಕೇಂದ್ರಸರ್ಕಾರದಿಂದ ತಡೆಗೋಡೆ ಏಕೆ ಕುಸಿಯಿತು ಎನ್ನುವುದನ್ನು ನೋಡಲಿಕ್ಕೆ ಪುಣೆಯ ಕೇಂದ್ರ ಸಂಶೋಧನಾಲಯದಿಂದ ಒಂದು ತಂಡ ಬಂದು ನೋಡಿ ಗುಣಮಟ್ಟದ ಕೊರತೆಯಿಂದ ಇದು ಕುಸಿದಿದೆಯೆಂದು ಆಯಿತು. ಇದರ ಪುನರ್ ನಿರ್ಮಾಣಕ್ಕೆ ಪುನಃ ಒಂದು ಎಸ್ಟಿಮೇಟ್ ಮಾಡಲಿಕ್ಕೆ ಸರ್ಕಾರ ಶುರು ಮಾಡಿತು. ಅದು ಎಷ್ಟಕ್ಕೆ ಮಾಡಬಹುದು? ಸುಮಾರು 11 ಕೋಟಿ ರೂ.ಗಳ ಎಸ್ಟಿಮೇಟ್ ಮಾಡಿದರು. ಕಾಮಗಾರಿ ಪ್ರಾರಂಭ ಹಂತದಲ್ಲಿ 1.65 ಕೋಟಿ ರೂ. ಇದ್ದದ್ದು ಅದು 11 ಕೋಟಿ ರೂ.ಗೆ ಮುಂದುವರಿಯಿತು. ಇದನ್ನು ಮುಂದುವರಿದ ಭಾಗವೆಂದು ಮಾಡಿದರು. ಆ ಸಂದರ್ಭದಲ್ಲಿ ಏನಾಯಿತು ಅಂದರೆ ಮಾನ್ಯ ಜೆ.ಹೆಚ್ ಪಟೀಲರ ಸರ್ಕಾರಕ್ಕೆ ಆ ಸಂಗತಿಗಳು ಗೊತ್ತಾಯಿತು. ಅವರು ಮೂಲ ಕಾಮಗಾರಿಯ ಶೇಕಡ 25ರಷ್ಟು ಮಾತ್ರ ಮುಂದುವರಿಸಬಹುದೆಂದು ಹೇಳಿದರು. ಅದಕ್ಕಿಂತ ಹೆಚ್ಚು ಮಾಡಬಾರದೆಂದು ಸಂಪುಟದ ಆದೇಶ ಮಾಡಿದರು. 2.36 ಕೋಟಿಯದ್ದು ಬಹುಶಃ 25 ಪರ್ಸೆಂಟ್ ಅಂದರೆ ಎಷ್ಟಾಗುತ್ತದೆಂದರೆ 60 ಲಕ್ಷ ರೂಪಾಯಿಯ ಕಾಮಗಾರಿಯಾಗುತ್ತದೆ. 60 ಲಕ್ಷ ರೂ.ಕಾಮಗಾರಿ ಇವತ್ತು 12.08 ಕೋಟಿ ರೂ.ಗಳಿಗೆ ಏರಿದೆ. 25 ಪರ್ಸೆಂಟ್ ಕಾಮಗಾರಿಯನ್ನು ಮಾತ್ರ ಮಾಡಿಯೆಂದು ಆಗಿನ ಸರ್ಕಾರ ಆದೇಶ ಮಾಡಿತ್ತು. 25 ಪರ್ಸೆಂಟ್ ಕೆಲಸಗಳನ್ನು ಅವರಿಗೆ ಕೊಡಿಯೆಂದು ಮುಖ್ಯ ಇಂಜಿನಿಯರ್‌ರವರು ಅವರಿಗೆ ಆದೇಶ ಮಾಡಿದರು. 25 ಪರ್ಸೆಂಟ್ ಕಾಮಗಾರಿ ಕೊಡಬೇಕೆಂದು ಚೀಫ್ ಇಂಜಿನಿಯರ್ ಮಾಡಿದಂತಹ ಆದೇಶವನ್ನು ಉಡುಪಿಯ ಇದಕ್ಕೆ ಸಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜಿನಿಯರ್ 25 ಪರ್ಸೆಂಟ್ ಕಾಮಗಾರಿ ಕೊಡುವುದನ್ನು ಬಿಟ್ಟು 11

ಕೋಟಿ ರೂಪಾಯಿ ಕಾಮಗಾರಿಯನ್ನು ಮಾಡಲು ಮರುದಿನವೇ ಗುತ್ತಿಗೆದಾರರಿಗೆ ವಹಿಸಿಕೊಟ್ಟರು. ಇಲ್ಲಿಂದ ಆದೇಶ ಹೋದ ಮರುದಿನ ಅವರು ಆದೇಶ ಕೊಡುತ್ತಾರೆ. ಅದು ಕೂಡ ಏನು ಮಾಡಿದ್ದಾರೆಂದರೆ, ಒಪ್ಪಂದದಲ್ಲಿ 11 ಕೋಟಿ ರೂ.ಗೆ ಗುತ್ತಿಗೆದಾರರ ಶರತ್ತು ಏನೆಂದರೆ ಪುನಃ 14 ಪರ್ಸೆಂಟ್ ಹೆಚ್ಚಳ ಆ ಗುತ್ತಿಗೆಯಲ್ಲಿ ಅದು 12.08 ಕೋಟಿ ರೂಪಾಯಿ ಆಯಿತು. 60 ಲಕ್ಷ ರೂ ಇದ್ದದ್ದು 12 ಕೋಟಿ ರೂ.ಆಗಿದೆ ಇದರಲ್ಲಿ ಭಾರಿ ಗೋಲ್‌ಮಾಲ್‌ಗಳು ಆಗಿದೆಯೆಂದು ಸರ್ಕಾರಕ್ಕೆ ತಿಳಿಸುವಂತಹದ್ದು ಆ ಭಾಗದಿಂದ ಆಯಿತು. ತಕ್ಷಣ 10-8-99ಕ್ಕೆ ಈ ಒಪ್ಪಂದವನ್ನು ರದ್ದು ಮಾಡಬೇಕೆಂದು ಕ್ಯಾಬಿನೆಟ್ ಡಿಸಿಷನ್ ಆಯಿತು. ಆಮೇಲೆ ರದ್ದು ಮಾಡಿದರು. ಆದರೆ ಗುತ್ತಿಗೆದಾರರು ಏನು ಮಾಡಿದರು ಹೈಕೋರ್ಟ್‌ಗೆ ಹೋದರು. ಇದು ಸರಿಯಲ್ಲ, ನಾವು ಈಗಾಗಲೇ ಶೇಕಡ 80ರಷ್ಟು ಕೆಲಸಗಳನ್ನು ಮಾಡಿ ಆಗಿದೆ, ಇದು ಕಾನೂನು ಬಾಹಿರವೆಂದು ಅವರು ಹೇಳಿದರು. ಸರ್ಕಾರದ ನಿರ್ಲಕ್ಷ್ಯ ಎಷ್ಟರವರೆಗೆ ಅಂದರೆ ಕೋರ್ಟ್‌ನಲ್ಲಿ ಈ ಕೆಲಸಗಳು ಆಗಲಿಲ್ಲವೆಂದು ಹೇಳುವಂತಹ ಮಂಡನೆ ಮಾಡಲಿಲ್ಲ. ಗುತ್ತಿಗೆ ನೀಡಿದ್ದು 1999ನೇ ಜುಲೈ 15ನೇ ತಾರೀಖಿಗೆ. ಗುತ್ತಿಗೆಯನ್ನು ರದ್ದು ಮಾಡಿದ್ದು 8ನೇ ಆಗಸ್ಟ್ 1999ಕ್ಕೆ. 25 ದಿನಗಳಲ್ಲಿ 11 ಕೋಟಿ ರೂಪಾಯಿ ಕೆಲಸದಲ್ಲಿ ಶೇಕಡ 80ರಷ್ಟು ಕೆಲಸವಾಗಿದೆಯೆಂದು ಹೈಕೋರ್ಟ್‌ನಲ್ಲಿ ಗುತ್ತಿಗೆದಾರರು ವಾದ ಮಾಡಿದರು. ಅದರ ಬಗ್ಗೆ ಸರ್ಕಾರದ ಕಡೆಯಿಂದ ಯಾರೂ ಕೂಡ ಕೌಂಟರ್ ಮಾಡಲಿಲ್ಲ. ಯಾರೂ ಕೂಡ ಕೊಶ್ಚನ್ ಮಾಡಲಿಲ್ಲ. ಅವರ ವಾದವನ್ನು ಅಪ್‌ಹೆಲ್ಡ್ ಮಾಡಿ ಸರ್ಕಾರಕ್ಕೆ ಕೋರ್ಟ್ ಆದೇಶ ಕೊಡುತ್ತದೆ, ಇದನ್ನು ಸರ್ಕಾರ ಪರಿಶೀಲನೆ ಮಾಡಬೇಕೆಂದು ಹೇಳಿದರು. ಇದರ ನಂತರ ಇದು ಸರ್ಕಾರದ ಮುಂದೆ ಬಂತು. ಈಗ ವಾದ ಪ್ರತಿವಾದಗಳು ಶುರುವಾಗಿವೆ. ವಾದ ಪ್ರತಿವಾದಗಳು ಹೇಗೆ ಶುರುವಾಗಿದೆ ಅಂದರೆ, ಯಾರು ಹಿಂದೆ ಗುತ್ತಿಗೆ ಮಾಡಿದ್ದ ಆತನೇ ಇದನ್ನು ಮುಂದುವರೆದ ಕಾಮಗಾರಿಯೆಂದು ಮಾಡಬೇಕು ಅವನಿಗೆ ಇದನ್ನು ಕೊಡಬೇಕು 60 ಲಕ್ಷದ್ದು 12 ಕೋಟಿ ರೂ.ಗಳಿಗೆ ಏರಿರುವುದನ್ನು ಅವನಿಗೆ ಕೊಡಬೇಕೆಂದು ಹೇಳುವಂತಹ ವಾದ ಒಂದು ಕಡೆ. ಶೇಕಡ 80ರಷ್ಟು ಕೆಲಸ ಆಗಿದೆಯೆಂದು ಹೇಳಿ ಅಲ್ಲಿನ ಎಕ್ಸಿಕ್ಯೂಟಿವ್ ಇಂಜಿನಿಯರ್ ಬಿಲ್ ಮಾಡಿ ಈ ಹಣವನ್ನು ಕೊಡಬೇಕೆಂದು ಹೇಳುವುದು ಎರಡನೆಯ ಸಂಗತಿ. 25 ದಿನಗಳಲ್ಲಿ 12.08 ಕೋಟಿ ರೂ. ಕೆಲಸ ಶೇಕಡ 80ರಷ್ಟು ಆಗಿದೆಯೆಂದು ಹೇಳುವಂತಹದ್ದು ನಡೆದಿದೆ. ಮೂರನೆಯದಾಗಿ ಭಾರಿ ಒತ್ತಡ ಪತ್ರಿಕೆಗಳಲ್ಲಿ ಬಂದಿದೆ, ಇದನ್ನು ಹಿಂದಿನ ಕಂಟ್ರಾಕ್ಟರ್‌ಗೆ ಕೊಡಬೇಕೆಂದು ಹೇಳಿ ಇಬ್ಬರು ಮಂತ್ರಿಗಳು ಒತ್ತಡ ಹಾಕುತ್ತಿದ್ದಾರೆ. ಆ ಕೆಲಸವನ್ನು ಬೇರೆಯವರಿಗೆ ಕೊಡಬಾರದು ಟೆಂಡರ್ ಕರೆಯಬಾರದೆಂದು ಒತ್ತಡ ಹಾಕುತ್ತಿದ್ದಾರೆ. ನಿಮ್ಮ ಟ್ರಾನ್ಸ್‌ಪರೆನ್ಸಿ ಆಕ್ಟ್ ಎಲ್ಲಿ ಹೋಯಿತು ಸ್ವಾಮಿ? ಇದು ಹೊಸ ಕಾಮಗಾರಿಯೆಂದು ಆಗಬೇಕಾಗಿದೆ. ಇದನ್ನು ಮುಂದುವರಿದ ಕಾಮಗಾರಿಯೆಂದು ಮಾಡಬಾರದು. ಈ ರೀತಿಯ ಒಂದು ಗೊಂದಲ ಗುಣಮಟ್ಟವನ್ನು ಕಾಪಾಡಿಕೊಳ್ಳದ ಕಾಂಟ್ರಾಕ್ಟರ್ ಅವರನ್ನು ಬ್ಲ್ಯಾಕರ್‌ಲಿಸ್ಟ್‌ನಲ್ಲಿ ಹಾಕಬೇಕಾದವರಿಗೆ ಪುನಃ ಅವರಿಗೆ

ಕೊಡಬೇಕೆಂದು ಹೇಳುತ್ತಿದ್ದಾರೆ. ಶೇಕಡ 80ರಷ್ಟು ಕೆಲಸವಾಗಿದೆಯೆಂದು ನೀವು ಹೇಳುತ್ತಿದ್ದೀರಿ, ಶೇಕಡ 80ರಷ್ಟು ಕೆಲಸ ಅಲ್ಲಿ ಆಗಿದೆಯೇ? ಈ ಕೆಲಸಗಳನ್ನು ಟೆಂಡರ್ ಮೂಲಕ ಮಾಡಲಿಕ್ಕೆ ಏಕೆ ಅಭ್ಯಂತರ ಮಾಡುತ್ತಿದ್ದೀರಿ ತಾವು? ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳ ವ್ಯಾಪ್ತಿಗೆ ಇದು ಬರುತ್ತದೆ. ಅವರು ಏನು ಹೇಳುತ್ತಾರೆ, ಇದು ನನ್ನ ವ್ಯಾಪ್ತಿಗೆ ಬರುವುದಿಲ್ಲ ಮೈನರ್ ಇರಿಗೇಷನ್ ವ್ಯಾಪ್ತಿಗೆ ಬರುತ್ತದೆಂದು ಹೇಳುತ್ತಾರೆ. ನಾನು ಇದನ್ನು ಪತ್ರಿಕೆಯಲ್ಲಿ ಓದಿದ್ದು. ಮೈನರ್ ಇರಿಗೇಷನ್ ಮಂತ್ರಿಗಳು ಏನು ಹೇಳುತ್ತಾರೆಂದರೆ ಇಲ್ಲ ಇದು ನನ್ನ ವ್ಯಾಪ್ತಿಗೆ ಬರುವುದಿಲ್ಲ ಅವರ ವ್ಯಾಪ್ತಿಗೆ ಬರುತ್ತದೆಂದು ಹೇಳುತ್ತಾರೆ. ಈ ರೀತಿ ತುಂಬಾ ಗೋಲ್‌ಮಾಲ್‌ಗಳಾಗಿವೆ. ಇದರ ಬಗ್ಗೆ ತಕ್ಷಣ ತನಿಖೆಯಾಗಬೇಕು. ಇದರ ಗುತ್ತಿಗೆದಾರರನ್ನು ಬದಲಾವಣೆ ಮಾಡಬೇಕು. ಕೆಲಸ ಟೆಂಡರ್ ಮುಖಾಂತರವಾಗಬೇಕು. ಏನು ಪೇಮೆಂಟ್ ಮಾಡಲಿಕ್ಕೆ ತಾವೆಲ್ಲಾ ತಯಾರು ಮಾಡಿದ್ದೀರಿ, ಆ ಪೇಮೆಂಟ್ ತಡೆಹಿಡಿಯುವಂತಹ ಕೆಲಸಗಳನ್ನು ಮಾಡಬೇಕು. ಈ ಕಾಮಗಾರಿಗಳು ತಕ್ಷಣ ಮುಗಿಯುವಂತಹ ಕೆಲಸ ಮಾಡಬೇಕು. ಕೇವಲ 60 ಲಕ್ಷದ್ದು 12.08 ಕೋಟಿಗೆ ಏರಿಸಿದ್ದು ಇದು ಸರ್ಕಾರಿ ಹಣವನ್ನು ಕಬಳಿಸುವಂತಹ ದೊಡ್ಡ ಹುನ್ನಾರವಾಗಿದೆ. ಕಾಮಗಾರಿ ಟೆಂಡರ್ ಮುಖಾಂತರ ಆಗಬೇಕೆನ್ನುವ ಆಗ್ರಹವನ್ನು ಮಾಡುತ್ತೇನೆ.

+ ಶ್ರೀ ಬಿ.ರಮಾನಾಥ್ ರೈ (ಬಂದರು ಮತ್ತು ಮೀನುಗಾರಿಕೆ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯಸದಸ್ಯರು ತಡೆಗೋಡೆ ನಿರ್ಮಿಸುವಲ್ಲಿ ಏನೇನು ನಡೆಯಿತು ಹೇಗೆ ಗುತ್ತಿಗೆ ಕೊಡಲಾಯಿತು ಅದೆಲ್ಲವನ್ನೂ ಹೇಳಿದ್ದಾರೆ. ಇದೆಲ್ಲಾ ನಡೆದದ್ದು ಹಿಂದಿನ ಸರ್ಕಾರದಲ್ಲಿ ನಾವು ಅಧಿಕಾರಕ್ಕೆ ಬಂದ ಮೇಲೆ ಹೊಸ ಗುತ್ತಿಗೆ ಕೊಡತಕ್ಕ ಕೆಲಸವನ್ನು ನಾವು ಮಾಡಲಿಲ್ಲ. ಹಳೆಯ ಪೇಮೆಂಟ್ 12.08 ಕೋಟಿ ಕೆಲಸದಲ್ಲಿ ಒಂದು ನಯಾಪೈಸೆಯನ್ನು ಕೊಡಲಿಕ್ಕೆ ಕ್ರಮವನ್ನು ಕೈಗೊಳ್ಳಲಿಲ್ಲ. ಕೊಡುವುದಿಲ್ಲ ಆ ಕೆಲಸ ಮಾಡುವುದಿಲ್ಲ. ನಾನು ಏಧಾನಪರಿಷತ್‌ನಲ್ಲಿ ಒಂದು ಮಾತನ್ನು ಹೇಳಿದೆ. ಯಾವುದನ್ನು ಮಾಡಬೇಕಾದರೂ ಕಾನೂನಿನ ಮಿತಿಯಲ್ಲಿ ಮಾಡುತ್ತೇವೆ ಹೊರತು ಬೇರೆ ಯಾವುದೇ ರೀತಿಯಲ್ಲಿ ಮಾಡುವುದಿಲ್ಲವೆನ್ನುವ ಭರವಸೆಯನ್ನು ಏಧಾನಪರಿಷತ್‌ನಲ್ಲಿ ಪ್ರಶ್ನೆ ಮಾಡಿದಾಗ ನಾನು ಸ್ಪಷ್ಟಪಡಿಸಿದ್ದೇನೆ. ಮಾನ್ಯ ಸದಸ್ಯರು ಯಾವುದೇ ರೀತಿಯ ಆತಂಕಕ್ಕೆ ಬರಬೇಕಾಗಿಲ್ಲ. ತಡೆಗೋಡೆ ನಿರ್ಮಾಣದ ಬಗ್ಗೆ ಯಾವುದು ಆರೋಪಪಟ್ಟಿದೆ ಆ ಬಗ್ಗೆ ಒಂದು ನಯಾಪೈಸೆಯನ್ನೂ ಕೂಡ ಪೇ ಮಾಡಬಾರದೆಂದು ನಾನು ನಿರ್ದೇಶನ ಕೊಟ್ಟಿದ್ದೇನೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಾದೇಶದ ಬಗ್ಗೆ ಒಂದು ಸಮಿತಿಯನ್ನೂ ಕೂಡ ಮಾಡಿದ್ದೇವೆ. ಯಾರು ಸರಿಯಾಗಿ ಕೆಲಸ ಮಾಡಿದ್ದಾರೆ ಅವರಿಗೆ ಮಾತ್ರ ಕೊಡಬೇಕು. ಯಾವುದು ಅನ್ಯಾಯವಿದೆ ಅದನ್ನೆಲ್ಲಾ ಪೆಂಡಿಂಗ್ ಇಡಬೇಕೆನ್ನುವ ಕೆಲಸ ಮಾಡಿದ್ದೇವೆ. ಈ ಬಗ್ಗೆ ಒಂದು ನಯಾಪೈಸೆ ಕೂಡ ಬಿಲ್ ಪಾಸ್ ಮಾಡತಕ್ಕ ಕೆಲಸ ಆಗಿಲ್ಲ.

ಇನ್ನುಮುಂದೆ ಇದರ ಬಗ್ಗೆ ಏನೂ ಕ್ರಮ ಕೈಗೊಳ್ಳುವಂಥಾದ್ದು ಇಲ್ಲವೆಂದು ಹೇಳುತ್ತೇನೆ. ಈಗ ಕಾನೂನು ವ್ಯಾಪ್ತಿಯಲ್ಲಿ ಏನು ತೀರ್ಮಾನ ಮಾಡಬೇಕೋ ಅದನ್ನು ನಾವು ಮಾಡುತ್ತೇವೆ.

ಶ್ರೀ ಸಿ.ಚೆನ್ನಿಗಪ್ಪ: ತುಮಕೂರು ಜಿಲ್ಲೆ ಡಿ.ಸಿ.ಸಿ. ಬ್ಯಾಂಕ್ ಬಗ್ಗೆ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡಬೇಕೆಂದು ನಾನು ಮನವಿ ಮಾಡಿದ್ದೆ. ಆದರೂ ಅದು ಬಂದಿಲ್ಲ.

ಅಧ್ಯಕ್ಷರು: ತಾವು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೀರಿ. ಇವತ್ತು ನಾಳೆ ನೋಡೋಣ. ಬರದಿದ್ದರೆ ನಾಡದ್ದು ಬೇಕಾದರೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿ ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ.

(ಆ) ಬೆಳೆ ವಿಮಾ ಯೋಜನೆ ಕುರಿತು.

+ ಶ್ರೀ ಹೆಚ್.ಎಸ್.ಮಹದೇವಪ್ರಸಾದ್(ಗುಂಡ್ಲುಪೇಟೆ): ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಬೆಳೆ ವಿಮೆ ಯೋಜನೆ ಎಂದು ಹೇಳಿ ಜಾರಿಗೆ ಕೊಟ್ಟಿದ್ದು ಈ ಯೋಜನೆಯಡಿಯಲ್ಲಿ ರೈತರು ಅರ್ಜಿಯನ್ನು ಸಲ್ಲಿಸುವುದಕ್ಕೆ 31.7.2001ರಂದು ಕಡೆಯ ದಿವಸ ಎಂದು ಮಾಡಿದ್ದಾರೆ. ಈ ಯೋಜನೆ ಜಾರಿಗೆ ಬಂದಿದ್ದೇ ಇತ್ತೀಚೆಗೆ ಅಂದರೆ 15-20 ದಿವಸಗಳ ಹಿಂದೆ. ಹಾಗಾಗಿ ಈ ಬೆಳೆ ವಿಮಾ ಯೋಜನೆಯಲ್ಲಿ ಏನು ಬಿತ್ತನೆ ಮಾಡಿರುತ್ತಾರೆ, ಆ ಬೆಳೆಗಳಿಗೆ ಮಾತ್ರ ಇದು ಅನ್ವಯಿಸುತ್ತದೆ. ಈ ಯೋಜನೆಗೆ ಹಣ ಕೂಡ ನಿಗದಿ ಮಾಡಿದ್ದಾರೆ. ಜೋಳ ಒಂದು ಹೆಕ್ಟೇರ್‌ಗೆ ಇಷ್ಟು, ರಾಗಿಗೆ ಹೆಕ್ಟೇರ್‌ಗೆ ಇಷ್ಟು ಎಂದು ಹೇಳಿ ಈ ಜೋಳಕ್ಕೆ ಒಂದು ಹೆಕ್ಟೇರ್‌ಗೆ ನಾಲ್ಕು ಸಾವಿರ ಎಂದು ಮಾಡಿದ್ದಾರೆ, ಭತ್ತಕ್ಕೆ 12,600 ರೂಪಾಯಿ ಎಂದು ಮಾಡಿದ್ದಾರೆ. ಹಾಗೆಯೇ ಮುಸುಕಿನ ಜೋಳಕ್ಕೆ 9,100 ರೂಪಾಯಿ, ರಾಗಿಗೆ 4200 ರೂಪಾಯಿ ಈ ತರಹ ನಾಲ್ಕೈದು ಬೆಳೆಗಳಿಗೆ ನಿಗದಿ ಮಾಡಿ ಅದರಲ್ಲಿ ಬ್ಯಾಂಕಿನಲ್ಲಿ ಖಾತೆ ತೆಗೆದು ಎಷ್ಟು ಎಕರೆ ಬೆಳೆ ಬೆಳೆಯಲಾಗಿದೆ, ಅದರ ಬಗ್ಗೆ ಎಷ್ಟು ಇನ್‌ಷುರೆನ್ಸ್ ಪಡೆಯುವಂಥ ಹಣಕ್ಕೆ ಎರಡೂವರೆ ಪರ್ಸೆಂಟ್ ಹಣ ಬ್ಯಾಂಕಿಗೆ ಕಟ್ಟಬೇಕು ಎಂದು ಇದೆ. ಮತ್ತೆ ಆರ್.ಟಿ.ಸಿ. ವಗೈರೆ, ಬೆಳೆ ಬಗ್ಗೆ ದೃಢೀಕರಣ ಪತ್ರ ತೆಗೆದುಕೊಳ್ಳಬೇಕು. ಇದರ ಜೊತೆಗೆ ಕೃಷಿ ಇಲಾಖೆಯವರು ಕೂಡತಕ್ಕಂಥ ಒಂದು ಫಾರಂ ಏನಿದೆ ಅದು ನಮೂನೆಯಲ್ಲಿ ಎಲ್ಲಾ ಭರ್ತಿ ಮಾಡಿಕೊಡಬೇಕು. ಇದು ಕಳೆದ ಒಂದು ವಾರದಷ್ಟೇ ಜನರಿಗೆ ಪ್ರಚಾರ ಆಗಿರುವಂಥಾದ್ದು. ಇದನ್ನು ಕೊಡುವುದಕ್ಕೆ ಜುಲೈ 31ನೇ ತಾರೀಖನ್ನು ಕೊನೆಯ ದಿವಸ ಎಂದು ಮಾಡಿದ್ದಾರೆ. ಕಳೆದ ತಿಂಗಳು 30 ಮತ್ತು 31ನೇ ತಾರೀಖು ನಮ್ಮ ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕು ಕಚೇರಿ, ಕೃಷಿ ಇಲಾಖೆಯ ಕಚೇರಿ ಮತ್ತು ಬ್ಯಾಂಕುಗಳಲ್ಲಿ ಸಾವಿರಾರು ಜನರು ಸೇರಿ